# ಸರ್ಕಾರಿ ಪ್ರೌಢಶಾಲೆ, ಗಂಧನಹಳ್ಳಿ, ಕೆ.ಆರ್.ನಗರ ತಾಲ್ಲೂಕು. ಮೈಸೂರು ಜಿಲ್ಲೆ.

9ನೇ ತರಗತಿ ಎರಡನೇ ಸಂಕಲನಾತ್ಮಕ ಪರೀಕ್ಷೆ– ಮಾರ್ಚ್– 2020 ಸಮಾವಿಜ್ಞಾನ

ಒಟ್ಟು ಅಂಕಗಳು–80 ನೀಲಿ ನಕಾಶೆ ಸಮಯ– 3 ಗಂಟೆ

## ಉದ್ದೇಶವಾರು ಅಂಕ ಹಂಚಿಕೆ

| ಕ್ರ.ಸಂ | ಉದ್ದಿಷ್ಟಗಳು | ಶೇಕಡವಾರು | ಅಂಕಗಳು |
|---|---|---|---|
| 1 | ಜ್ಞಾನ | 16% | 13 |
| 2 | ತಿಳುವಳಿಕೆ | 50% | 40 |
| 3 | ಅನ್ವಯ | 28% | 22 |
| 4 | ಕೌಶಲ | 06% | 05 |
| | ಒಟ್ಟು | 100% | 80 |

## ವಿಭಾಗವಾರು ಅಂಕ ಹಂಚಿಕೆ

| ಕ್ರ.ಸಂ | ವಿಭಾಗಗಳು | ಅಂಕ ಹಂಚಿಕೆ |
|---|---|---|
| 1 | ಇತಿಹಾಸ | 25 |
| 2 | ರಾಜ್ಯಶಾಸ್ತ್ರ | 11 |
| 3 | ಸಮಾಜಶಾಸ್ತ್ರ | 08 |
| 4 | ಭೂಗೋಳಶಾಸ್ತ್ರ | 22 |
| 5 | ಅರ್ಥಶಾಸ್ತ್ರ | 07 |
| 6 | ವ್ಯವಹಾರ ಅಧ್ಯಯನ | 07 |
| | ಒಟ್ಟು | 80 |

## ಪ್ರಶ್ನೆಗಳ ಸ್ವರೂಪಕ್ಕನುಗುಣವಾಗಿ ಅಂಕ ಹಂಚಿಕೆ

| ಕ್ರ.ಸಂ | ಪ್ರಶ್ನೆಗಳ ಸ್ವರೂಪ → ವಿಭಾಗಗಳು ↓ | ಬಹು ಆಯ್ಕೆ | 1 ಅಂಕ | 2 ಅಂಕಗಳು | 3 ಅಂಕಗಳು | 4 ಅಂಕಗಳು | 5 ಅಂಕಗಳು | ಒಟ್ಟು ಪ್ರಶ್ನೆಗಳು | ಒಟ್ಟು ಅಂಕಗಳು |
|---|---|---|---|---|---|---|---|---|---|
| 1 | ಇತಿಹಾಸ | 1(2) | 1(2) | 2(2) | 3(3) | 4(2) | – | 11 | 25 |
| 2 | ರಾಜ್ಯಶಾಸ್ತ್ರ | 1(1) | 1(1) | 2(1) | 3(1) | 4(1) | – | 05 | 11 |
| 3 | ಸಮಾಜಶಾಸ್ತ್ರ | 1(2) | 1(1) | 2(1) | 3(1) | – | – | 05 | 08 |
| 4 | ಭೂಗೋಳಶಾಸ್ತ್ರ | 1(1) | 1(2) | 2(2) | 3(2) | 4(1) | 5(1) | 09 | 22 |
| 5 | ಅರ್ಥಶಾಸ್ತ್ರ | 1(1) | 1(1) | 2(1) | 3(1) | – | | 04 | 07 |
| 6 | ವ್ಯ.ಅಧ್ಯಯನ | 1(1) | 1(1) | 2(1) | 3(1) | – | | 04 | 07 |
| | ಒಟ್ಟು | 8(8) | 8(8) | 16(8) | 27(9) | 16(4) | 5(1) | 38 | 80 |

## ಕಠಿಣತೆಯ ಮಟ್ಟಕ್ಕನುಗುಣವಾಗಿ ಅಂಕ ಹಂಚಿಕೆ

| ಕ್ರ.ಸಂ | ಕಠಿಣತೆಯ ಮಟ್ಟ | ಶೇಕಡವಾರು | ಅಂಕಗಳು |
|---|---|---|---|
| 1 | ಸುಲಭ | 30% | 24 |
| 2 | ಸಾಧಾರಣ | 50% | 40 |
| 3 | ಕಠಿಣ | 20% | 16 |
| | ಒಟ್ಟು | 100% | 80 |

| ಕ್ರ.ಸ | ಘಟಕಗಳ ಹೆಸರು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | ಒಟ್ಟು | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|
| | ಇತಿಹಾಸ | ಬ.ಆ | 1ಅ | 2ಅ | 3ಅ | 4ಅ | ಬ.ಆ | 1ಅ | 2ಅ | 3ಅ | 4ಅ | ಬ.ಆ | 1ಅ | 2ಅ | 3ಅ | 4ಅ | | | |
| 1 | ಕ್ರೈಸ್ತ ಮತ್ತು ಇಸ್ಲಾಂ ಮತಗಳು | | | | | | | | | 3(1) | | | | | | | | 01 | 03 |
| 2 | ಮಧ್ಯಕಾಲೀನ ಭಾರತ ಮತ್ತು ರಾಜಕೀಯ ಸಂಕ್ರಮಣ | | | | | | | | | 3(1)* | | | | 2(1) | | | | 01 | 02 |
| 3 | ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | 1(1) | | | | | | | | | | | | | 3(1) | | | 02 | 04 |
| 4 | ವಿಜಯನಗರ ಮತ್ತು ಬಹಮನಿ ಸಾಮ್ರಾಜ್ಯ | | | | | | | | | | 4(1) | | | | | | | 01 | 04 |
| 5 | ಮೊಘಲರು ಮತ್ತು ಮರಾಠರು | | | | | | | | | 3(1) | | | | | | | | 01 | 03 |
| 6 | ಭಕ್ತಿಪಂಥ | | 1(1) | | | | | 1(1) | | | | | | | | | | 02 | 02 |
| 7 | ಮಧ್ಯಯುಗದ ಯುರೋಪ್ | | | 2(1) | | | | | | | | | | | | | | 01 | 02 |
| 8 | ಆಧುನಿಕ ಯುರೋಪ್ | 1(1) | | | | | | | | | 4(1)* | | | | | | | 01 | 01 |
| 9 | ಕ್ರಾಂತಿಗಳು ಮತ್ತು ರಾಷ್ಟ್ರಗಳ ಏಕೀಕರಣ | | | | | | | | | | 4(1) | | | | | | | 01 | 04 |
| | ರಾಜ್ಯಶಾಸ್ತ್ರ | | | | | | | | | | | | | | | | | | |
| 1 | ನಮ್ಮ ಸಂವಿಧಾನ | | | | | | | | | | 4(1) | | | | | | | 01 | 04 |
| 2 | ಕೇಂದ್ರ ಸರ್ಕಾರ | 1(1) | | | | | | | | | | | | | | | | 01 | 01 |
| 3 | ರಾಜ್ಯ ಸರ್ಕಾರ | | | | | | | | 2(1)* | | | | | | | | | – | – |

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 4 | ನ್ಯಾಯಾಂಗ ವ್ಯವಸ್ಥೆ | | | | | | | | | | | | | | | | | – | – |
| 5 | ಭಾರತದ ಚುನಾವಣಾ ವ್ಯವಸ್ಥೆ | | | | | | | 1(1) | | | | | | | | | | 01 | 01 |
| 6 | ದೇಶದ ರಕ್ಷಣೆ | | | | | | | | 2(1) | | | | | | | | | 01 | 02 |
| 7 | ರಾಷ್ಟ್ರೀಯ ಭಾವೈಕ್ಯತೆ | | | | | | | | | | | | | | 3(1) | | | 01 | 03 |
| | ಸಮಾಜಶಾಸ್ತ್ರ | | | | | | | | | | | | | | | | | | |
| 1 | ಕುಟುಂಬ | | | | | | | | | | | | | | 3(1) | | | 01 | 03 |
| 2 | ಸಾಮಾಜೀಕರಣ | 1(1) | | | | | | | 2(1)* | | | | | | | | | 01 | 01 |
| 3 | ಸಾಮಾಜಿಕ ಬದಲಾವಣೆ | | | | | | | | 2(1) | | | | | | | | | 01 | 02 |
| 4 | ಸಮುದಾಯ | | 1(1) | | | | 1(1) | | | | | | | | | | | 02 | 02 |
| | ಭೂಗೋಳಶಾಸ್ತ್ರ | | | | | | | | | | | | | | | | | | |
| 1 | ನಮ್ಮ ರಾಜ್ಯ- ಕರ್ನಾಟಕ | | | | | | | | | | | | | | | | 1# | 01 | 01 |
| 2 | ಪ್ರಾಕೃತಿಕ ವಿಭಾಗಗಳು | | | | | | | | 2(1) | | | | | | | | 1# | 01 | 03 |
| 3 | ಕರ್ನಾಟಕದ ವಾಯುಗುಣ, ಮಣ್ಣು, ಸಸ್ಯವರ್ಗ ಮತ್ತು ಪ್ರಾಣಿವರ್ಗ | | | | | | | | | | 4(1) | | | | | | | 01 | 04 |
| 4 | ಕರ್ನಾಟಕದ ಜಲ ಸಂಪನ್ಮೂಲಗಳು | | | | | | | | | | | | | 2(1) | | | 1# | 01 | 03 |
| 5 | ಕರ್ನಾಟಕದ ಭೂ ಸಂಪತ್ತು | | | | | | | | | 3(1) | | | | | | | | 01 | 03 |
| 6 | ಖನಿಜ ಸಂಪನ್ಮೂಲಗಳು | | | | | | | 1(1) | | | | | | | | | | 01 | 01 |
| 7 | ಸಾರಿಗೆ | | | | | | | | | 3(1)* | | | | | | | 1# | – | 01 |
| 8 | ಕರ್ನಾಟಕದ ಕೈಗಾರಿಕೆಗಳು | 1(1) | | | | | | | | | | | | | | | 1# | 01 | 02 |
| 9 | ಕರ್ನಾಟಕದ ಪ್ರಮುಖ ಪ್ರವಾಸಿ ಕೇಂದ್ರಗಳು | | | | | | | | | | | | | | 3(1) | | | 01 | 03 |

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| 10 | ಕರ್ನಾಟಕದ ಜನಸಂಖ್ಯೆ | | 1(1) | | | | | | | | | | | | | | | 01 | 01 |
| | **ಅರ್ಥಶಾಸ್ತ್ರ** | | | | | | | | | | | | | | | | | | |
| 1 | ನೈಸರ್ಗಿಕ ಸಂಪನ್ಮೂಲಗಳು | 1(1) | | | | | | | | | | | | | 3(1) * | | | 01 | 01 |
| 2 | ಭಾರತದ ಮಾನವ ಸಂಪನ್ಮೂಲಗಳು | | | | | | | | | | | | | | 3(1) | | | 01 | 03 |
| 3 | ಬಡತನ ಮತ್ತು ಹಸಿವು | | 1(1) | | | | | | | | | | | | | | | 01 | 01 |
| 4 | ಶ್ರಮ ಮತ್ತು ಉದ್ಯೋಗ | | | | | | | | 2(1) | | | | | | | | | 01 | 02 |
| | **ವ್ಯವಹಾರ ಅಧ್ಯಯನ** | | | | | | | | | | | | | | | | | | |
| 1 | ವ್ಯವಹಾರ ನಿರ್ವಹಣೆ | | | | | | | | | | | | | 2(1) | | | | 01 | 02 |
| 2 | ಹಣಕಾಸು ನಿರ್ವಹಣೆ | 1(1) | | | | | | | | 3(1)* | | | 1(1) | | | | | 02 | 02 |
| 3 | ವ್ಯವಹಾರದಲ್ಲಿ ಲೆಕ್ಕಬರಹ | | | | | | | | | 3(1) | | | | | | | | 01 | 03 |
| | | 7(7) | 4(4) | 2(1) | | | 1(1) | 3(3) | 8(4) | 12(4) | 16(4) | | 1(1) | 6(3) | 15(5) | | 5(1) | | |
| | ಒಟ್ಟು | 13(12) | | | | | 40(16) | | | | | 22(9) | | | | | 5(1) | 38 | 80 |

**ಸೂಚನೆಗಳು:**

- ಆವರಣದ ಹೊರಗಿರುವ ಸಂಖ್ಯೆಗಳು ಅಂಕಗಳನ್ನು ಮತ್ತು ಆವರಣದ ಒಳಗಿರುವ ಸಂಖ್ಯೆಗಳು ಪ್ರಶ್ನೆಗಳನ್ನು ಸೂಚಿಸುತ್ತವೆ.
- “ * ” ಈ ಚಿಹ್ನೆಯು ಆಂತರಿಕ ಆಯ್ಕೆಯ ಪ್ರಶ್ನೆಗಳನ್ನು ಸೂಚಿಸುತ್ತದೆ.
- “ # ” ಈ ಚಿಹ್ನೆಯು ನಕ್ಷೆಯ ಪ್ರಶ್ನೆಗಳನ್ನು ಸೂಚಿಸುತ್ತದೆ.

# ಸರ್ಕಾರಿ ಪ್ರೌಢಶಾಲೆ, ಗಂಧನಹಳ್ಳಿ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ

**9ನೇ ತರಗತಿ** **ಎರಡನೇ ಸಂಕಲನಾತ್ಮಕ ಮೌಲ್ಯಮಾಪನ** **ಸಮಾಜವಿಜ್ಞಾನ**

**ಒಟ್ಟು ಅಂಕಗಳು– 80** **ಮಾದರಿ ಪ್ರಶ್ನೆಪತ್ರಿಕೆ–1** **ಸಮಯ– 3 ಗಂಟೆಗಳು**

---

**I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ/ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಆಯ್ಕೆಯನ್ನು ಗುರುತಿಸಿ, ಉತ್ತರ ಪತ್ರಿಕೆಯಲ್ಲಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **8x1=8**

1. **ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದವರು**

   ಎ) ರಾಮಾನುಜಾಚಾರ್ಯರು ಬಿ) ಮಧ್ವಾಚಾರ್ಯರು ಸಿ) ಶಂಕರಾಚಾರ್ಯರು ಡಿ) ಬಸವಣ್ಣನವರು

2. **ಪುನರುಜ್ಜೀವನದ ತವರು**

   ಎ) ಫ್ರಾನ್ಸ್ ಬಿ) ಇಂಗ್ಲೆಂಡ್‘ ಸಿ) ಜರ್ಮನಿ ಡಿ) ಇಟಲಿ

3. **ಕೇಂದ್ರ ಶಾಸಕಾಂಗದ ಕೆಳಮನೆ**

   ಎ) ರಾಜ್ಯಸಭೆ ಬಿ) ಲೋಕಸಭೆ ಸಿ) ವಿಧಾನಸಭೆ ಡಿ) ವಿಧಾನಪರಿಷತ್

4. **ಮಕ್ಕಳ ಸುಪ್ತ ಶಕ್ತಿ ಸಾಮರ್ಥ್ಯಗಳು ಬೆಳೆಯುವುದು ಇಲ್ಲಿ.**

   ಎ) ಕುಟುಂಬದಲ್ಲಿ ಬಿ) ಶಾಲೆಯಲ್ಲಿ ಸಿ) ನೆರೆಹೊರೆಯಲ್ಲಿ ಡಿ) ಧರ್ಮದಲ್ಲಿ

5. **ಕರ್ನಾಟಕದ ಕರಾವಳಿ ಪ್ರದೇಶ ಮತ್ತು ರಾಯಚೂರು ಜಿಲ್ಲೆಯ ನೀರಾವರಿ ಪ್ರದೇಶಗಳಲ್ಲಿ ಈ ಬಗೆಯ ಗ್ರಾಮ ಪ್ರಕಾರ ಕಂಡುಬರುತ್ತದೆ.**

   ಎ) ಪ್ರತ್ಯೇಕಿತ ಹೊಲ ಮನೆಗಳ ಗ್ರಾಮ ಬಿ) ಕೇಂದ್ರೀಕೃತ ಗ್ರಾಮ ಸಿ) ಚದುರಿದ ಗುಂಪು ಗ್ರಾಮ ಡಿ) ಸಾಲುಮನೆಗಳ ಗ್ರಾಮ

6. **ಈ ಕೆಳಗಿನವುಗಳಲ್ಲಿ ಒಂದು ಕೃಷಿ ಆಧಾರಿತ ಕೈಗಾರಿಕೆಯಾಗಿದೆ.**

   ಎ) ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಬಿ) ಹತ್ತಿಬಟ್ಟೆ ಕೈಗಾರಿಕೆ ಸಿ) ಕಾಗದದ ಕೈಗಾರಿಕೆ ಡಿ) ಸಿಮೆಂಟ್ ಕೈಗಾರಿಕೆ

7. **ಕಲ್ಲಿದ್ದಲು, ಪೆಟ್ರೋಲಿಯಂ ಖನಿಜಗಳು ಮುಂತಾದವು ಈ ಕೆಳಗಿನ ಬಗೆಯ ಸಂಪನ್ಮೂಲಗಳಾಗಿವೆ.**

   ಎ) ಮುಗಿದು ಹೋಗದ ಬಿ) ಮುಗಿದು ಹೋಗುವ ಸಿ) ಜೈವಿಕ ಡಿ) ಬರಿದಾಗದ

8. **ಭಾರತದ ಮೊದಲ ಷೇರು ಮಾರುಕಟ್ಟೆ ಈ ನಗರದಲ್ಲಿ ಪ್ರಾರಂಭವಾಯಿತು.**

   ಎ) ಹೈದರಾಬಾದ್ ಬಿ) ಚೆನ್ನೈ ಸಿ) ಮುಂಬೈ ಡಿ) ದೆಹಲಿ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **8x1=8**

9. ಮುಸ್ಲಿಂ ಸಂತರುಗಳನ್ನು ಸೂಫಿ ಸಂತರುಗಳೆಂದು ಕರೆಯುತ್ತಾರೆ. ಏಕೆ?
10. ಭಕ್ತಿ ಎಂದರೇನು?
11. ಮತದಾರರ ಪಟ್ಟಿಯನ್ನು ಏಕೆ ಪರಿಷ್ಕರಣೆ ಮಾಡಲಾಗುತ್ತದೆ?
12. ಬುಡಕಟ್ಟು ಎಂದರೇನು?
13. ಕರ್ನಾಟಕವನ್ನು "ಚಿನ್ನದ ನಾಡು" ಎಂದು ಕರೆಯುತ್ತಾರೆ. ಏಕೆ?
14. ಜನಸಾಂದ್ರತೆ ಎಂದರೇನು?
15. ಬಡತನ ಎಂದರೇನು?
16. ಹಣದ ಮಾರುಕಟ್ಟೆಯು ಬಂಡವಾಳ ಮಾರುಕಟ್ಟೆಗಿಂತ ಹೇಗೆ ಭಿನ್ನವಾಗಿದೆ?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **8x2=16**

17. ಅಲ್ಲಾವುದ್ದೀನನ ಮಾರುಕಟ್ಟೆ ಸುಧಾರಣೆಗಳು ಅವನಿಗೆ ಚರಿತ್ರೆಯಲ್ಲಿ ಅನನ್ಯ ಸ್ಥಾನವನ್ನು ತಂದುಕೊಟ್ಟಿವೆ. ಈ ಹೇಳಿಕೆಯನ್ನು ಸಮರ್ಥಿಸಿ.

18. ಊಳಿಗಮಾನ್ಯ ಪದ್ಧತಿಯಲ್ಲಿ ಧಣಿ ವರ್ಗದಲ್ಲಿದ್ದ ವಿವಿಧ ದರ್ಜೆಗಳನ್ನು ಹೆಸರಿಸಿ.

19. ವಿಧಾನಸಭೆಯು ರಾಜ್ಯ ಕಾರ್ಯಾಂಗದ ಮೇಲೆ ಹೇಗೆ ನಿಯಂತ್ರಣ ಹೊಂದಿದೆ? **ಅಥವಾ**

ಭೂ ಸೈನ್ಯವು ನಿರ್ವಹಿಸುವ ಕಾರ್ಯಗಳನ್ನು ವಿವರಿಸಿ.

20. ಸಾಮಾಜೀಕರಣದಿಂದ ಮನುಷ್ಯರು ಹೇಗೆ ಸಾಮಾಜಿಕ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ? **ಅಥವಾ**

ಸಾಮಾಜಿಕ ಬದಲಾವಣೆಯ ಲಕ್ಷಣಗಳನ್ನು ತಿಳಿಸಿ.

21. ಕರ್ನಾಟಕದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿ.

22. ಕರ್ನಾಟಕದ ವ್ಯವಸಾಯಕ್ಕೆ ನೀರಾವರಿ ಅತ್ಯಂತ ಅವಶ್ಯಕ. ಸಮರ್ಥಿಸಿ.

23. ಶ್ರಮದ ಲಕ್ಷಣಗಳನ್ನು ಪಟ್ಟಿಮಾಡಿ.

24. "ನಿಯಂತ್ರಣವು ನಿರ್ವಹಣಾ ಕಾರ್ಯದಲ್ಲಿ ಬಹುಮುಖ್ಯವಾದುದು". ಸ್ಪಷ್ಟೀಕರಿಸಿ.

## IV. ಈ ಕೆಳಗಿನ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ. 9x3=27

25. ಏಸುಕ್ರಿಸ್ತರ ಪ್ರಮುಖ ಬೋಧನೆಗಳನ್ನು ತಿಳಿಸಿ. **ಅಥವಾ**

ಮಹಮದ್ ಘೋರಿಯ ದಾಳಿಯಿಂದ ಭಾರತದ ಮೇಲೆ ಉಂಟಾದ ರಾಜಕೀಯ ಪರಿಣಾಮಗಳನ್ನು ವಿವರಿಸಿ.

26. ದ್ವೈತ ಸಿದ್ಧಾಂತ ಮತ್ತು ಅದ್ವೈತ ಸಿದ್ಧಾಂತದ ವಿಚಾರಧಾರೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

27. ಮೊಘಲರ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ವಿವರಿಸಿ.

28. ರಾಷ್ಟ್ರೀಯ ಭಾವೈಕ್ಯತೆಗೆ ಇರುವ ಅಡ್ಡಿಗಳನ್ನು ನಿವಾರಿಸಲು ನಿಮ್ಮ ಸಲಹೆಗಳೇನು?

29. "ಇತ್ತೀಚೆಗೆ ಆಧುನಿಕ ಕೇಂದ್ರ ಕುಟುಂಬಗಳು ದಿನೇ ದಿನೇ ಹೆಚ್ಚಾಗುತ್ತಿವೆ" ಈ ಹೇಳಿಕೆಯನ್ನು ಸೂಕ್ತ ಉತ್ತರಗಳೊಂದಿಗೆ ಸಮರ್ಥಿಸಿ.

30. ಕರ್ನಾಟಕದ ಆರ್ಥಿಕತೆಯ ಅಭಿವೃದ್ಧಿಯಲ್ಲಿ ವ್ಯವಸಾಯದ ಪಾತ್ರವನ್ನು ವಿವರಿಸಿ. **ಅಥವಾ**

ಕರ್ನಾಟಕದಲ್ಲಿ ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.

31. "ಪ್ರವಾಸವು ಮಾನವ ಜೀವನದ ಅನಿವಾರ್ಯ ಸಂಗತಿಯಾಗಿದೆ" ಸಮರ್ಥಿಸಿ.

32. ನೀವು ವಾಸಿಸುವ ಪರಿಸರದಲ್ಲಿ ಪರಿಸರದ ಹೆಜ್ಜೆ ಗುರುತನ್ನು ಕಡಿಮೆ ಮಾಡಲು ನೀವು ಯಾವ ಕ್ರಮಗಳನ್ನು ಕೈಗೊಳ್ಳುವಿರಿ. **ಅಥವಾ**

"ಮಾನವ ಸಂಪನ್ಮೂಲವು ಒಂದು ರಾಷ್ಟ್ರದ ಅಮೂಲ್ಯ ಸಂಪತ್ತು" ಈ ಹೇಳಿಕೆಯನ್ನು ಸಮರ್ಥಿಸಿ.

33. ವ್ಯವಹಾರ ಸಂಸ್ಥೆಗಳಲ್ಲಿ ಹಣಕಾಸಿನ ಪಾತ್ರ ಮತ್ತು ಪ್ರಾಮುಖ್ಯತೆಯನ್ನು ವಿವರಿಸಿ. **ಅಥವಾ**

ಲೆಕ್ಕಬರಹದ ಉಪಯೋಗಗಳು ಅಥವಾ ಪ್ರಯೋಜನಗಳನ್ನು ತಿಳಿಸಿ.

## V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು– ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4x4=16

34. ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿ.

35. ಪುನರುಜ್ಜೀವನ ಕಾಲದ ವಿಜ್ಞಾನದ ಬಗ್ಗೆ ವಿವರಿಸಿ. **ಅಥವಾ**

ಅಮೇರಿಕ ಸ್ವಾತಂತ್ರ್ಯ ಸಂಗ್ರಾಮದ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

36. ಭಾರತ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ಪಟ್ಟಿಮಾಡಿ.

37. ಕರ್ನಾಟಕದ ಸ್ವಾಭಾವಿಕ ಸಸ್ಯವರ್ಗಗಳ ಪ್ರಾಮುಖ್ಯತೆಯನ್ನು ವಿವರಿಸಿ.

## VI. ಕರ್ನಾಟಕದ ಅಂದವಾದ ನಕ್ಷೆ ಬರೆದು ಈ ಕೆಳಗಿನವುಗಳನ್ನು ಗುರುತಿಸಿ. 1+4=5

ಎ) ಕರಾವಳಿ ಮೈದಾನ ಬಿ) ಕಾವೇರಿ ನದಿ ಸಿ) ಕರ್ನಾಟಕದ ಹೆಬ್ಬಾಗಿಲು ಡಿ) ಬೆಂಗಳೂರು